ಜನಸಂದಣಿಯ ಗಲಾಟೆಗಿಂತ ಆಚೆ, ಆ ಸೂರ್ಯ ಮೌನದಿಂದ ಮೇಲೆ ಏರಿ ಬಂದಿರಬಹುದು... ಎಲ್ಲರ ನಡುವೆ ಇದ್ದೂ ಅಲಿಪ್ತನಾಗಿ ಉಳಿಯುವ ಒಬ್ಬಾತ... ಮತ್ತು ಇವೆಲ್ಲವನ್ನೂ ನೋಡಲು ನಾನು ಮಾತ್ರ ಅಲ್ಲಿರದೇ ಹೋದೆನಲ್ಲಾ ಎಂದು ಅವಳ ಆಲೋಚನೆ ಸಾಗುತ್ತಿತ್ತು.

ಇತ್ತೀಚೆಗೆ ಹೀಗೇ ಆಗುತ್ತದೆ. ತಾನು ಯೋಚಿಸಿದ್ದು ಯಾವುದೂ ನಡೆಯುವುದಿಲ್ಲ. ಸ್ಲೇಟಿನ ಮೇಲಿರುವ ಲೆಕ್ಕವನ್ನು ಬಿಡಿಸುವ ಮೊದಲೇ, ಅಲ್ಲಿ ಬರೆದಂತಹ ಲೆಕ್ಕವನ್ನು ಅಣ್ಣ ಅಳಿಸಿ ಹಾಕಿ ಹೊಸ ಲೆಕ್ಕ ಬರೆದ ಹಾಗೆ.

ಲೆಕ್ಕ ಬಿಡಿಸಿ ಏನಾಗಬೇಕು? ಇತ್ತೀಚೆಗೆ ಅದು ತಪ್ಪಾಗುವುದು ವರಸೆಯಾಗಿದೆ. ಆದರೆ ತಪ್ಪು ಅಥವಾ ಸರಿ ಎನ್ನುವುದನ್ನು ನಿರ್ಣಯಿಸುವವರು ಯಾರು? ಮೊನ್ನೆ ಸಂಸ್ಕಾರ, ಸಂಸ್ಕೃತಿಯ ಕುರಿತು ದೊಡ್ಡ ಚರ್ಚೆ ನಡೆದಿತ್ತು.

ಅಲ್ಲಿ ಯಾರೋ ಹೇಳಿದ್ದರು, 'ಪರಿವರ್ತನೆ ಹೊಂದುತ್ತಿರುವುದು ಸಂಸ್ಕೃತಿ. ಚಲನೆ ಇಲ್ಲದಿದ್ದರೆ ಅದು ನಿಂತ ನೀರಾಗಬಹುದು. ಅದರಲ್ಲಿ ಹಾವಸೆ ಬೆಳೆಯಬಹುದು...'

ಆಮೇಲೆ ಆ ಪರಿವರ್ತನೆ ಹೊಂದಿದ ಸಂಸ್ಕೃತಿಯ ದೃಷ್ಟಿಯಿಂದ ನೋಡಿದಾಗ ಹಳೆಯ ಲೆಕ್ಕ ತಪ್ಪಾಗಿ, ಹೊಸ ಲೆಕ್ಕ ಸರಿ ಎಂದು ಅನಿಸುವುದು ಹೇಗೆ?

ಈ ಚರ್ಚೆ ಎಲ್ಲಿ ನಡೆದಿತ್ತು? ಎಲ್ಲಿಯಾದರೂ ನಡೆಯಲಿ, ಎಲ್ಲಿ ಎಂಬುದು ಮುಖ್ಯವಲ್ಲ. ಏನು ಮಾತನಾಡಿಕೊಂಡರು ಎನ್ನುವುದು ಮುಖ್ಯ.

ಎಲ್ಲರೂ ಹುಮ್ಮಸ್ಸಿನಿಂದ ಮಾತನಾಡುತ್ತಿದ್ದರು. ಪ್ರತಿಯೊಬ್ಬರ ಹೇಳಿಕೆಗಳು ಆ ಪ್ರತಿಯೊಬ್ಬರಿಗೂ ಒಪ್ಪಿತವಾಗಿರುವಂತಹವು. ಅವರ ವಿಚಾರದಲ್ಲಿ ಅದು ಸರಿಯಾಗಿರುತ್ತಿತ್ತು. ಇನ್ನು ಅದು ಹೇಗೆ 'ಸರಿ' ಮತ್ತು 'ಯಾಕೆ' ಎನ್ನುವುದನ್ನು ಜನರಿಗೆ ತಿಳಿಸುವುದಕ್ಕಾಗಿ ಜನ ಒಬ್ಬರ ಮನಸ್ಸಿಗೆ ಮತ್ತು ಮನಸ್ಸಿನಲ್ಲಿರುವುದನ್ನು ತುಟಿಗೆ ತಂದುಕೊಳ್ಳುತ್ತಾರೆ. ಆದರೆ ಇಂತಹ ಮಾತುಗಳಿಂದ ಯಾವುದೂ ಬದಲಾಗುವುದಿಲ್ಲ... ಆಚರಣೆಗೆ ಬಂದಾಗ ಮಾತ್ರ ಬದಲಾವಣೆ ಉಂಟಾಗುತ್ತದೆ.

"ಆದರೆ ಈ ಬದಲಾವಣೆ ಉತ್ತಮ ಎಂದು ಖಡಾಖಂಡಿತವಾಗಿ ಹೇಳುವುದು ಸಾಧ್ಯವೇ?"

"ಹಾಗಿಲ್ಲದಿದ್ದರೂ ತನ್ನದಾಗಿಸಿಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ನಾವು ಮುಂದೆ ಸಾಗಲಾರೆವು."

"ಆದರೂ ಈ ಬದಲಾವಣೆ ನಮ್ಮ ಸಂಸ್ಕೃತಿಯ ಮರದ ಮೇಲೆ ಬಂದಳಿಕೆ ಹಾಗೆ ಬೆಳೆಯತೊಡಗಿದರೆ ಅದಕ್ಕೆ ನಾವು ಬೆಳೆಯಲು ಅವಕಾಶ ನೀಡಬೇಕೇ, ಬಂದಳಿಕೆಯನ್ನು ಮೂಲ ಸಹಿತ ಕಿತ್ತು ಬಿಸಾಡಬೇಕೇ?'

ಪ್ರತಿಯೊಂದಕ್ಕೂ ಮತಭೇದಗಳು.

'ಬಲಾತ್ಕಾರ' ಎಂದರೇನು? ಸ್ವ ಇಚ್ಛೆಯಿಂದ ಮಾಡಿದ ಸಂಭೋಗ ಎಂದರೇನು? 'ವೈವಾಹಿಕ ಅತ್ಯಾಚಾರ' ಎಂದರೇನು?

ಎಲ್ಲರ ಮಾತುಗಳು ಕಾನೂನನ್ನು ಆಧರಿಸಿ ಇರುವಂತಹದು. ಆದರೆ ಎಲ್ಲರೂ ಮಾತಿನ ವ್ಯಾಪ್ತಿಗೆ ಸರಿಹೊಂದುತ್ತಾರೆ ಎನ್ನುವಂತಿಲ್ಲ. ಕಾರಣವೇನೆಂದರೆ ಯಾವುದೇ ಸಂಗತಿ ಅಥವಾ ಮಾತುಕತೆ ಸರಳವಾಗಿ ಇರುವುದಿಲ್ಲ. ಅದಕ್ಕೆ ಶಾಖೆಗಳು, ಉಪಶಾಖೆಗಳು ಮೊಳೆಯುತ್ತಾ ಹೋಗುತ್ತವೆ.